ದಿನಾಂಕಃ 23-01-2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀಸವಾಲು ವಾದಿ ಪರ ವಕೀಲರಾದ ಶ್ರೀ. ಎಸ್ ಎನ್ ಎಸ್ ವಕೀಲರಿಂದ

ಸೂರ್ಯನಾರಾಯಣ ರವರು ನಿಮ್ಮ ಮತ್ತು ನಾಗರಾಜಪ್ಪ ಮೇಲೆ ದಾವೆ ಸಲ್ಲಿಸಿರುತ್ತಾರೆ ಎಂದರೆ ಸರಿ. ನಾಗರಾಜಪ್ಪನವರ ಊರು ಗೌನಿಚೆರವುಪಲ್ಲಿ ಎಂದರೆ ಸರಿ. ಅವರು ಮತ್ತು ನೀವು ಸೂರ್ಯನಾರಾಯಣ ರವರ ಜಮೀನಿಗೆ ತೊಂದರೆ ಕೊಡುತ್ತಿದ್ದೀರಿ ಅಂತ ದಾವೆ ಸಲ್ಲಿಸಿರುತ್ತಾರೆ ಎಂದರೆ ಸರಿ, ಸಾಕ್ಷಿ ಮುಂದುವರಿದು ಅವರ ಜಮೀನು ಇಲ್ಲ ಸ್ವಾಧೀನ ಇಲ್ಲ ಎಂದು ನುಡಿಯುತ್ತಾರೆ. ವಾದಿಯು ಹಾಕಿರುವ ದಾವೆ ಸರ್ವೆ ನಂ.9 ಬೊಡಗುಂಡ್ಲಪಲ್ಲಿಗೆ ಸೇರಿದ ಸರ್ವೆ ನಂಬರ್. ಅದರ ಪೂರಾ ವಿಸ್ತೀರ್ಣ 300 ಎಕರೆ. ಒಟ್ಟು ವಿಸ್ತೀರ್ಣ 300 ಎಕರೆ ಎಂಬುದಕ್ಕೆ ಯಾವ ದಾಖಲೆ ಇದೆ ಎಂದರೆ ಗೊತ್ತಿರುವುದಿಲ್ಲ. ಸರ್ವೆ ನಂ.9 ರಲ್ಲಿ ನಿಮಗೆ ಯಾವುದಾದರೂ ಜಮೀನು ಇದೆಯಾ ಎಂದರೆ ಸಾಕ್ಷಿಯು ಗೋಮಾಳ ಇದ್ದು ಅದಕ್ಕೆ ಅರ್ಜಿ ಹಾಕಿಕೊಂಡಿರುತ್ತೇನೆ ಆ ಅರ್ಜಿಯನ್ನು ನ್ಯಾಯಾಲಯಕ್ಕೆ ಕೊಟ್ಟಿರುತ್ತೇನೆ. ಆ ಅರ್ಜಿಯಲ್ಲಿ 2 ಎಕರೆ ಮಂಜೂರು ಮಾಡುವಂತೆ ಅರ್ಜಿ ಹಾಕಿರುತ್ತೇನೆ. ನಾನು ಅರ್ಜಿ ಹಾಕಿ 3 ವರ್ಷ ಆಗಿರುತ್ತದೆ. ನನ್ನ ಜೊತೆ ಬೇರೆ ಯಾರೂ ಅರ್ಜಿ ಹಾಕಿರುವುದಿಲ್ಲ. ಅರ್ಜಿ ಹಾಕಿದಂತೆ ಮಂಜೂರು ಮಾಡಿದ್ದಾರಾ ಎಂದರೆ ಆರ್ ಐ ಬಂದು ಅದು ಗೋಮಾಳ ಜಮೀನು ಮಂಜೂರು ಮಾಡುವುದಿಲ್ಲ ಅಂತ ಹೇಳಿರುತ್ತಾರೆ. ಆ ರೀತಿ ಹಿಂಬಹರ ಕೊಟ್ಟಿರುವುದಿಲ್ಲ ಮೌಖಿಕವಾಗಿ ಹೇಳಿರುತ್ತಾರೆ. ಸರ್ವೆ ನಂ.9 ರಲ್ಲಿ ಎರಡು ಎಕರೆ ಜಮೀನಿನಲ್ಲಿ ಅನುಭವದಲ್ಲಿ ಇರುತ್ತೇನೆ. ನೀವು ಹಾಕಿರುವ ತಕರಾರಿನಲ್ಲಿ ಹಾಕಿರುವ ವಿಷಯ ಗೊತ್ತ ಎಂದರೆ ಗೊತ್ತಿಲ್ಲ. ಸರ್ವೆ ನಂ.9 ಕ್ಕೆ ಚೆಕ್ಕುಬಂದಿ ಪಶ್ಚಿಮಕ್ಕೆ ಮೋಹನ್ ರೆಡ್ಡಿ, ಪೂರ್ವಕ್ಕೆ ಸರ್ಕಾರಿ, ಉತ್ತರಕ್ಕೆ ಯಾಮನ್ನಗಾರಿ ಸಾಲಮ್ಮ, ದಕ್ಷಿಣಕ್ಕೆ ಸರ್ಕಾರಿ ರಸ್ತೆ ನನ್ನ ಸ್ವಂತ ಜಮೀನು ಇದೆ. ಸ್ವಂತ ಜಮೀನಿನ ಸರ್ವೆ ನಂ. 27. ಸರ್ವೆ ನಂ.9 ಕ್ಕೂ ಸರ್ವೆ ನಂ.27 ಕ್ಕೂ ಎಷ್ಟು ಅಂತರ ಇದೆ ಎಂದರೆ ಗಡಿ. ಸರ್ವೆ ನಂ.9 ನಿಮ್ಮ ಸರ್ವೆ ನಂ.27 ಯಾವ ಕಡೆ ಬರುತ್ತದೆ ಎಂದರೆ ಉತ್ತರಕ್ಕೆ. ಉತ್ತರಕ್ಕೆ ಇರುತ್ತದೆ ಎಂಬ ಬಗ್ಗೆ ದಾಖಲೆ

ಕೊಟ್ಟಿರುತ್ತೀರಾ ಎಂದರೆ ಕೊಟ್ಟಿರುತ್ತೇನೆ. ನ್ಯಾಯಾಲಯಕ್ಕೆ ಎರಡು ದಾಖಲೆ ಕೊಟ್ಟಿರುತ್ತೇನೆ. ನನ್ನ ಮಗಳ ಹೆಸರಿನಲ್ಲಿ ಎರಡು ಎಕರೆ ಇದ್ದು ನನ್ನ ಹೆಸರಿನಲ್ಲಿ ಒಂದು ಎಕರೆ ಇದೆ. ನಿಮ್ಮ ತಕರಾರಿನಲ್ಲಿ ನನಗೂ ಈ ಜಮೀನಿಗೆ ಸಂಬಂಧ ಇಲ್ಲ ಅಂತ ಹಾಕಿರುತ್ತೀರಿ ಎಂದರೆ ಜಮೀನಿನಲ್ಲಿ ಎರಡು ಎಕರೆಗೆ ಸಂಬಧ ಇದ್ದು ಮಿಕ್ಕಿದ್ದಕ್ಕೆ ಸಂಬಂಧ ಇಲ್ಲ. ದಿ:19-8-1979 ರಲ್ಲಿ ತಲ್ಲೂಕು ಕಛೇರಿಯಿಂದ ಜಮೀನು ಮಂಜೂರು ಮಾಡಿ ವಾದಿಗೆ ಕೊಟ್ಟಿರುತ್ತಾರೆ ಎಂದರರೆ ಸರಿ. ಆ ಪ್ರಕಾರ ವಾದಿ ಸೂರ್ಯನಾರಾಯಣ ರವರು ಸ್ವಾಧೀನ ಇರುತ್ತಾರೆ ಎಂದರೆ ಇಲ್ಲ. ಅವರ ಸ್ವಾಧೀನಕ್ಕೆ ಸುಮಾರು 10 ವರ್ಷಗಳಿಂದ ದಕ್ಕೆ ಮಾಡುತ್ತಿದ್ದೀರಿ ಎಂದರೆ ಸರಿಯಲ್ಲ. ಅವರು ಆ ಊರಿನವರು ಅಲ್ಲ ಜಮೀನಿನ ಸ್ವಾಧೀನ ಇರುವುದಿಲ್ಲ. ಈ ವಿಚಾರವಾಗಿ ಮೊದಲಿನಿಂದಲೂ ವಾದಿ ಸ್ವಾಧೀನಕ್ಕೆ ತೊಂದರೆ ಕೊಡುವುದೇ ನಿಮ್ಮ ಕೆಲಸ ಎಂದರೆ ಸರಿಯಲ್ಲ. ಈ ವಿಚಾರವಾಗಿ ನಿಮ್ಮ ಮೇಲೆ ದೂರು ದಾಖಲು ಮಾಡಿರುತ್ತಾರೆ ಎಂದರೆ ಸರಿ. ಆ ದೂರಿನ ಪ್ರಕಾರ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ಸಿಸಿ ನಂ. 94/22 ರಂತೆ ದೂರು ನಿಮ್ಮ ಮತ್ತು ಇತರರ ಮೇಲೆ ದಾಖಲು ಮಾಡಿರುತ್ತಾರೆ ಎಂದರೆ ಸರಿ.

ನಿಪಿ-2 ತಾಲ್ಲೂಕು ಕಛೇರಿಯಿಂದ ವಾದಿಗೆ ನೀಡಿರುತ್ತಾರೆ ಎಂದರೆ ಸುಳ್ಳು ತಾಲ್ಲೂಕು ಕಛೇರಿಯಲ್ಲಿ ದಾಖಲೆ ಇರುವುದಿಲ್ಲ ಎಂದು ಹಿಂಬಹರ ನೀಡಿದ್ದು ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಿಪಿ-2 ರಲ್ಲಿ ತಹಸೀಲ್ದಾರ್ ಕಛೇರಿಯಿಂದ ನೀಡಿದ್ದು ಅದರಲ್ಲಿ ಸೀಲ್ ಮತ್ತು ಸಹಿ ಇದೆ ಎಂದರೆ ಸುಳ್ಳು ಅದು ಸೃಷ್ಟಿ ಮಾಡಿಕೊಂಡಿರುವ ದಾಖಲೆ. ನಿಪಿ-8 ರಂತೆ 1971 ರಿಂದ 1977 ರವರೆಗೆ ಪಹಣಿಯಲ್ಲಿ ಸೂರ್ಯನಾರಾಯಣ ಅಂತ ಹೆಸರು ಇದೆ ಎಂದರೆ ಸರಿ ಆದರೆ ಕಛೇರಿಯಲ್ಲಿ ಇರುವುದಿಲ್ಲ. ತಾಲ್ಲೂಕು ಕಛೇರಿಗೆ ಯಾವ ದಿನ ಅರ್ಜಿ ಕೊಟ್ಟಿರುತ್ತೀರಾ ಎಂದರೆ ದಿನಾಂಕ ನೆನಪಿರುವುದಿಲ್ಲ. ಹಿಂಬರಹದಲ್ಲಿ ಏನು ಬರೆದಿರುತ್ತಾರೆ ಎಂದರೆ ಸೂರ್ಯನಾರಾಯಣ ಹೆಸರಿನಲ್ಲಿ ದಾಖಲೆ ಇಲ್ಲ ಅಂತ ಇರುತ್ತದೆ. ಆ ದಾಖಲೆಯಲ್ಲಿ ವಾದಿಗೆ ಯಾವುದೇ ರೀತಿಯಲ್ಲಿ ಮಂಜೂರಾಗಿರುವುದಿಲ್ಲ ಅಂತ ಹಿಂಬಹರ ಕೊಟ್ಟಿರುವುದಿಲ್ಲ ಎಂದರೆ ಇಲ್ಲ ಎಂದು ಕೊಟ್ಟಿರುತ್ತಾರೆ. ಆ ದಾಖಲೆಯಲ್ಲಿ ಕಡತ ಲಭ್ಯವಿಲ್ಲ, ನಿಯಮಾನುಸಾರ ಲಭ್ಯವಾದರೆ ಕೊಡುತ್ತೇವೆ ಅಂತ ಇದೆ ಎಂದರೆ ಇಲ್ಲ. ನಿಡಿ-1 ದಾಖಲೆ ಪಡೆದು 2 ವರ್ಷ ಆಗಿದೆ. ದಿ:10-1-22 ರಲ್ಲಿ ಪಡೆದಿರುತ್ತೀರಿ ಎಂದರೆ

ಸುಮ್ಮನೆ ನಿಂತಿರುತ್ತಾರೆ. ನೀವು ಆ ದಾಖಲೆಯನ್ನು ಪಡೆಯುವಷ್ಟರಲ್ಲಿ ವಾದಿಯು ಯಾವುದೇ ದಾವೆಯನ್ನು ಹಾಕಿರುವುದಿಲ್ಲ ಎಂದರೆ ಸರಿ. ಈ ದಾವೆಗಾಗಿ ಆ ದಾಖಲೆಯನ್ನು ಸೃಷ್ಟಿಮಾಡಿಕೊಂಡು ಹಾಕಿರುತ್ತೀರಿ ಎಂದರೆ ಸರಿಯಲ್ಲ. ಅದರಲ್ಲಿ ಇರುವ ಸಹಿ ತಾಲ್ಲೂಕು ಕಛೇರಿ ಸಹಿ ಅಲ್ಲ ಎಂದರೆ ಸರಿಯಲ್ಲ. ತಹಸೀಲ್ದಾರ್ ರವರ ಹೆಸರು ಗೊತ್ತಿಲ್ಲ.

ಮುಂದುವರಿದ ಪಾಟೀಸವಾಲಿಗೆ ಸಮಯ ಕೋರಿದ್ದು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ,

ಪ್ರಧಾನ ಸಿ.ನ್ಯಾ ಮತ್ತು ಜೆ.ಎಂ.ಎಫ್.ಸಿ.,
ಚಿಂತಾಮಣಿ.